ಅಕಡೆಮಿಕ್ ಅಲ್ಲದ ನೆಲೆಯಿಂದ ಬರುವ ಲೇಖಕರ ಬರಹಗಳನ್ನು ನೋಡಲು ಬೇಕಾದ ವ್ಯವಧಾನ ಕಡಿಮೆ. ಇಂತಹ ಲೇಖಕರ ಒಳ್ಳೆಯ ಪುಸ್ತಕಗಳು ಪ್ರಸಿದ್ಧ ಲೇಖಕರ ಸಂದಣಿಯಲ್ಲಿ ಎಷ್ಟೋ ಸಲ ಚರ್ಚೆಯಾಗದೆ ಹೋಗುತ್ತವೆ. ಪರಂಜ್ಯೋತಿಯವರ ಕಥೆ–ಕಾದಂಬರಿಗಳು ಸಾಧಾರಣ ಮಟ್ಟದವು. ಅವರ ಕೃತಿಗಳಲ್ಲೆಲ್ಲ ನೀಲಗಿರಿಯ ಬದುಕನ್ನು ಕುರಿತ 'ಮಂಜಿನೆಡೆಯ ಚಿತ್ರಗಳು' ಮುಖ್ಯ ಪುಸ್ತಕ ಅನಿಸಿತು.

ಪರಂಜ್ಯೋತಿಯವರ ಮೂಲ ಹೆಸರು ಕೆ. ಪುಟ್ಟಸ್ವಾಮಿ. ಹುಟ್ಟಿದ್ದು ತಮಿಳುನಾಡಿನ ನೀಲಗಿರಿಯಲ್ಲಿ. ಇದೇ ಸೀಮೆಯ ಕೋರಕುಂದ ಎಂಬಲ್ಲಿ ಅವರು ಬೆಳೆದರು. ಮೈಸೂರು ಸೀಮೆಯ ಅವರ ಪೂರ್ವಜರು, ಬರಗಾಲ ಬಿದ್ದಾಗ ನೀಲಗಿರಿಗೆ ಕಾಫಿ ಟೀ ತೋಟಗಳಲ್ಲಿ ಕೂಲಿಗಾಗಿ ವಲಸೆ ಹೋದವರು. ಪರಂಜ್ಯೋತಿಯವರ ವೃತ್ತಿಜೀವನ 'ಭುಜಂಗಯ್ಯನ ದಶಾವತಾರ'. ಅವರು ಯೌವನದಲ್ಲಿ ನೀಲಗಿರಿಯ ಚಹತೋಟಗಳಲ್ಲಿಯೂ ಭವಾನಿ ಅಣೆಕಟ್ಟು ಕಾಮಗಾರಿಯಲ್ಲೂ ಮೇಸ್ತ್ರಿಯಾಗಿ ಕೆಲಸ ಮಾಡಿದರು. ಅವರ ತಂದೆಯವರು 'ಮಗ ಊರ್ಜಿತವಾಗಲಿ' ಎಂದು ಆಲೂಗೆಡ್ಡೆ ವ್ಯಾಪಾರಕ್ಕೆ ಹಚ್ಚಿದ್ದರು. ಕಿರಾಣಿ ಅಂಗಡಿ ಇಟ್ಟುಕೊಟ್ಟಿದ್ದರು. ಇವ್ಯಾವೂ ಕೈಹಿಡಿಯಲಿಲ್ಲ. ಈ ನಡುವೆ ಅವರು ಪತ್ರಿಕಾ




ಏಜೆಂಟರಾಗಿ, ತಾತ್ಕಾಲಿಕ ಪೋಸ್ಟ್‌ಮಾಸ್ಟರರಾಗಿ ಕೆಲಸ ಮಾಡಿದರು. ಈ ನಡುವೆ ಅವರಿಗೆ ಫೋಟೊಗ್ರಫಿಯ ಹುಚ್ಚು ಹಿಡಿಯಿತು. ಆದರದು ಜೀವನ ನಿರ್ವಹಣೆಗೆ ನೆರವಾಗುವ ಬದಲು ಖರ್ಚನ್ನು ಬೇಡುವ ಬಾಬತ್ತಾಯಿತು. ನೀಲಗಿರಿಯ 'ಕೊಂಪೆಯ ಬದುಕು' (ಇದು ಪರಂಜ್ಯೋತಿಯವರದೇ ನುಡಿಗಟ್ಟು) ಸಾಕೆನಿಸಿದಾಗ, ಅವರು ಸಣ್ಣ ಪತ್ರಿಕೆಯೊಂದಲ್ಲಿ ಕೆಲಸ ಮಾಡಲೆಂದು ಪುತ್ತೂರಿಗೆ ಧಾವಿಸಿದರು. ಪತ್ರಿಕೆ ನಿಲುಗಡೆಯಾಗುವ ಹಂತ ಬಂದಾಗ, ಮದ್ರಾಸಿನಲ್ಲಿ ಸೋವಿಯತ್ ದೂತಾವಾಸದ ಸಮಾಚಾರ ವಿಭಾಗದಲ್ಲಿ ಸಂಪಾದಕರಾಗಿ ಸೇರಿದರು. ಸೋವಿಯತ್ ರಷ್ಯಾ ವಿಘಟಿತವಾದ ಬಳಿಕ, ಕೆಲಸ ಕಳೆದುಕೊಂಡು ನವಕರ್ನಾಟಕ ಪ್ರಕಾಶನದಲ್ಲಿ ಸಂಪಾದಕರಾಗಿ ದುಡಿದು ನಿವೃತ್ತರಾದರು.

'ಪರಂಜ್ಯೋತಿ' ಹೆಸರನ್ನು ಮೊದಲ ಸಲ ಕೇಳಿದಾಗ, ಯಾರೊ ಆಧ್ಯಾತ್ಮಿಕ–ಧಾರ್ಮಿಕ ಬರಹ ಬರೆಯುವ ಲೇಖಕ ಅನಿಸಿತ್ತು. ಆದರೆ ಈ ಹೆಸರು ಹುಟ್ಟಿಸಬಹುದಾದ ಉಪೇಕ್ಷೆಯನ್ನು ಒಡೆಯುವಂತೆ ಅವರ ಬರಹಗಳಿವೆ. ಈ ಕಾವ್ಯನಾಮವು ವೈಯಕ್ತಿಕ ಗುರುತನ್ನು ಅಡಗಿಸಿಕೊಂಡು ಅಜ್ಞಾತವಾಗಿ ಬದುಕಲೆತ್ನಿಸಿದ ಅವರ ಗುಣವನ್ನೂ ಸೂಚಿಸುವಂತಿದೆ. ಅವರು ಮಕ್ಕಳ ಸಾಹಿತ್ಯವನ್ನು 'ನೀಲಾಂಬರಿ' ಎಂಬ ಹೆಸರಲ್ಲಿ ಬರೆದರು. ತಮ್ಮ ಮೂಲ ಕೋರಕುಂದ ಪುಟ್ಟಸ್ವಾಮಿ ಹೆಸರನ್ನು ಕೆ.ಪಿ. ಸ್ವಾಮಿ ಎಂದು ಸಂಕ್ಷಿಪ್ತೀಕರಿಸಿಕೊಂಡರು. ಪುಟ್ಟಸ್ವಾಮಿಯನ್ನು ನೀಲಗಿರಿಯ ತಮಿಳರು ಬುಟ್ಟಸ್ವಾಮಿ ಎಂದು ಕರೆಯುತ್ತಿದ್ದರಿಂದ ಈ ಬದಲಾವಣೆ ಮಾಡಿಕೊಂಡಿದ್ದಂತೆ. ಅವರು ದಲಿತ ಕುಟುಂಬದಿಂದ ಬಂದವರಾದರೂ ಎಲ್ಲೂ ತಮ್ಮ ಸಾಮಾಜಿಕ ಹಿನ್ನೆಲೆ ಹೇಳಿಕೊಳ್ಳುವುದಿಲ್ಲ. ಅವರ ಬರಹದಲ್ಲಿ ಅಸ್ಪೃಶ್ಯತೆಯ ಅನುಭವದ ಪ್ರಸ್ತಾಪವೂ ಕಾಣುವುದಿಲ್ಲ. ಬ್ರಿಟಿಷರು ಸ್ಥಾಪಿಸಿದ ಟೀತೋಟಗಳಲ್ಲಿ, ಹಲವು ಭಾಷೆ, ಪ್ರಾಂತ್ಯ, ಧರ್ಮ, ಸಂಸ್ಕೃತಿಯ ಹಿನ್ನೆಲೆಯಿಂದ ವಲಸೆ ಬಂದ ಕೂಲಿಕಾರರು ಒಟ್ಟಾಗಿ ಬದುಕುವ ಪರಿಸರದಲ್ಲಿ ಬೆಳೆದಿದ್ದರಿಂದ, ಅವರಿಗೆ ಅಸ್ಪೃಶ್ಯತೆಯ ಅನುಭವವೂ ಆಗಿರಲಿಕ್ಕಿಲ್ಲ. ಆದರೆ ನೀಲಗಿರಿಗೆ ಹೋಗಿ ಬಂದವರು ತಮ್ಮಲ್ಲಿದ್ದ ಹಣದಿಂದ ಹಳೇ ಮೈಸೂರು ಪ್ರಾಂತ್ಯದ